ಕರ್ನಾಟಕ ಸರ್ಕಾರ
(ವಿದ್ಯುತ್ ಪರಿವೀಕ್ಷಣಾಲಯ)

ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ,
ನಂ: 1360, ಅನಿಕೇತನ ರಸ್ತೆ,
'ಜಿ' ಅಂಡ್ 'ಹೆಚ್' ಬ್ಲಾಕ್, ಕುವೆಂಪುನಗರ,
ಮೈಸೂರು-570023.

**********************************************************************************************

**ಮಾಹಿತಿ ಹಕ್ಕು ಅಧಿನಿಯಮ, 2005 ರ ಸೆಕ್ಷನ್ 4 (1) (ಬಿ) ರ ಅನುಗುಣವಾಗಿ ಪ್ರಕಟಿಸಬೇಕಾದಂತಹ ಮಾಹಿತಿ**

1. **ಸಂಸ್ಥೆಯ ಧ್ಯೇಯೋದ್ಧೇಶ ಮತ್ತು ಕಾರ್ಯಗಳು:**

ವಿದ್ಯುತ್ ಪರಿವೀಕ್ಷಣಾಲಯದ ವಲಯ ಕಚೇರಿಯು ಮೈಸೂರಿನಲ್ಲಿದ್ದು ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು ಕಚೇರಿಯ ಮುಖ್ಯಸ್ಥರಾಗಿರುತ್ತಾರೆ. ಸದರಿ ವಲಯ ಕಚೇರಿಗೆ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳ ಕ್ಷೇತ್ರದಲ್ಲಿರುವ ವಿದ್ಯುತ್ ಸ್ಥಾವರಗಳು ಬರುತ್ತವೆ. (ಅಂದರೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಪ್ರದೇಶ).

ಸದರಿ ಕಚೇರಿಯು ಖಾಸಗಿ ಕಟ್ಟಡದಲ್ಲಿದ್ದು,
ಸಂ. 1360, ಜಿ ಅಂಡ್ ಹೆಚ್ ಬ್ಲಾಕ್, ಅನಿಕೇತನ ರಸ್ತೆ, ಕುವೆಂಪುನಗರ, ಮೈಸೂರು ಇಲ್ಲಿ ಇರುತ್ತದೆ.

ಸದರಿ ಕಚೇರಿಯಲ್ಲಿ ಪರಿವೀಕ್ಷಣಾಧಿಕಾರಿಗಳು ಮತ್ತು ಲೆಕ್ಕಪತ್ರದ ವರ್ಗದವರು ಕಾರ್ಯನಿರ್ವಹಿಸುತ್ತಾರೆ.

ಸದರಿ ಕಚೇರಿಯಲ್ಲಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಬ್ಬರು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು ಮೈಸೂರು ವಲಯದ ಅಧಿಕಾರಿಯಾಗಿ, ಇಬ್ಬರು ವಿದ್ಯುತ್ ಪರಿವೀಕ್ಷಕರು ವಿಭಾಗೀಯ ಅಧಿಕಾರಿಗಳಾಗಿ, ಇಬ್ಬರು ಉಪ ವಿದ್ಯುತ್ ಪರಿವೀಕ್ಷಕರು ಉಪ-ವಿಭಾಗೀಯ ಅಧಿಕಾರಿಗಳಾಗಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಉಪ ವಿದ್ಯುತ್ ಪರಿವೀಕ್ಷಕರಿಗೆ ಸಹಕರಿಸಲು ಇಬ್ಬರು ಸಹಾಯಕ ವಿದ್ಯುತ್ ಪರಿವೀಕ್ಷಕರು ಇರುತ್ತಾರೆ. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು ಮತ್ತು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಕಚೇರಿಯಲ್ಲಿ ತಾಂತ್ರಿಕ ವಿಷಯಗಳಿಗೆ ನೆರವಾಗಲು ತಲಾ ಒಂದೊಂದು ಸಹಾಯಕ ವಿದ್ಯುತ್ ಪರಿವೀಕ್ಷಕರು ಇರುತ್ತಾರೆ. ಆಡಳಿತಾತ್ಮಕ ವಿಷಯವಾಗಿ ಒಬ್ಬ ಲೆಕ್ಕಾಧಿಕಾರಿಗಳು, ಒಬ್ಬ ವ್ಯವಸ್ಥಾಪಕರು, ಇಬ್ಬರು ಅಧೀಕ್ಷಕರು, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಒಬ್ಬರು ಶೀಘ್ರಲಿಪಿಗಾರರು ಮತ್ತು ಇಬ್ಬರು ದ್ವಿತೀಯ ದರ್ಜೆ ಸಹಾಯಕರುಗಳ ಹುದ್ದೆಯು ಸರ್ಕಾರದಿಂದ ನೇಮಕವಾಗಿದೆ.

ಈ ಕಚೇರಿಯ ಮುಖ್ಯ ಕಾರ್ಯೋದ್ಧೇಶವು ವಲಯದ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿದ್ಯುತ್ ಸ್ಥಾವರಗಳು ಸುಸ್ಥಿತಿಯಲ್ಲಿರಲು ಮತ್ತು ಮಾನವರಿಗೆ, ಪ್ರಾಣಿಗಳಿಗೆ ಮತ್ತು ಆಸ್ತಿಗೆ ವಿದ್ಯುತ್ತಿನಿಂದ ಯಾವುದೇ ಹಾನಿ ಆಗದಂತೆ ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳುವುದಾಗಿರುತ್ತದೆ. ಸದರಿ ವಿಷಯಗಳನ್ನು ಸಾಧಿಸಲು ಕೆಳಕಾಣಿಸಿದ ಕಾರ್ಯಗಳನ್ನು ನಿರ್ವಹಿಸಲಾಗುತ್ತದೆ.

ಅ) ಡಿ.ಒ.ಪಿ. ಗೆ ಅನುಗುಣವಾಗಿ ಕೆ.ಪಿ.ಟಿ.ಸಿ.ಎಲ್. ಮತ್ತು ವಿದ್ಯುತ್ ಸರಬರಾಜು ಕಂ. ಗಳ ವಿದ್ಯುತ್ ಸ್ಥಾವರಗಳ ಮತ್ತು ಗ್ರಾಹಕರಿಗೆ ಸೇರಿದಂತಹ ಹೆಚ್.ಟಿ./ಎಲ್.ಟಿ. ಸ್ಥಾವರಗಳು, ವಿದ್ಯುತ್ ಜನಕಗಳು, ಬಹುಮಹಡಿ ಕಟ್ಟಡಗಳು, ಲಿಫ್ಟ್‌ಗಳು, ಮತ್ತು ಎಸ್ಕಲೇಟರ್‌ಗಳು, ಕ್ಷ-ಕಿರಣ, ಸಿನಿಮಾ ಮತ್ತು ನಿಯಾನ್ ಸೈನ್ಸ್ ವಿದ್ಯುತ್ ಸ್ಥಾವರಗಳ ನೀಲನಕ್ಷೆ ಪರಿಶೀಲನೆ ಮತ್ತು ಅನುಮೋದನೆ.

ಆ) ಡಿ.ಒ.ಪಿ. ಗೆ ಅನುಗುಣವಾಗಿ ಮೇಲ್ಕಂಡ ವಿದ್ಯುತ್ ಸ್ಥಾವರಗಳ ಪ್ರಥಮ ಪರಿವೀಕ್ಷಣೆ ಕೈಗೊಂಡು ಸುರಕ್ಷತೆಯ ಪ್ರಮಾಣವನ್ನು ಪರಿಶೀಲಿಸಿ ಚಾಲನಾ ಅನುಮೋದನೆ ನೀಡುವುದು.

ಇ) ಡಿ.ಒ.ಪಿ. ಗೆ ಅನುಗುಣವಾಗಿ ಸದರಿ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆ ನಡೆಸುವುದು.

ಈ) ಡಿ.ಒ.ಪಿ. ಗೆ ಅನುಗುಣವಾಗಿ ವಿದ್ಯುತ್ ಅಪಘಾತಗಳ ತನಿಖೆ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸುವುದು.

ಉ) ಮೈಸೂರು ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿದ್ಯುತ್ ಪರ್ಯವೇಕ್ಷಕರ ರಹದಾರಿ ಮತ್ತು ತಂತಿ ಕೆಲಸಗಾರರ ರಹದಾರಿ (ಹೊಸದು ಮತ್ತು ನವೀಕರಣ) ಅರ್ಜಿಗಳನ್ನು ಸ್ವೀಕರಿಸಿ, ಪರಿಶೀಲಿಸಿ ಅವುಗಳನ್ನು ಸದಸ್ಯ ಕಾರ್ಯದರ್ಶಿಗಳು, ಎಲ್.ಎ. ಅಂಡ್ ಇ.ಬಿ., ಬೆಂಗಳೂರು ಇವರಿಗೆ ಕಳುಹಿಸಿಕೊಡುವುದು.

ಊ) ಮೈಸೂರು ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿದ್ಯುತ್ ಪರ್ಯವೇಕ್ಷಕರ ರಹದಾರಿ ಮತ್ತು ತಂತಿ ಕೆಲಸಗಾರರ ರಹದಾರಿಗಳಿಗೆ ಹಿಂಬರಹ ಮಾಡುವುದು.

ಋ) ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಸಿನಿಮಾ ಆಪರೇಟರ್‌ಗಳ ರಹದಾರಿಗಳ ನವೀಕರಣ ಮತ್ತು ಹಿಂಬರಹಗೊಳಿಸುವುದು.

2. <u>ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಅಧಿಕಾರ ಮತ್ತು ಕರ್ತವ್ಯಗಳು:</u>

ಅ) <u>ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು:</u>
ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು ಕಚೇರಿಯ ಮುಖ್ಯಸ್ಥರಾಗಿರುತ್ತಾರೆ. ಇವರು ಕಚೇರಿ ಕೈಪಿಡಿ ಮತ್ತು ಡಿ.ಓ.ಪಿ. ಪ್ರಕಾರ ಕಾರ್ಯ ನಿರ್ವಹಿಸುತ್ತಾರೆ. ಇವರು ವಲಯದ ಅಧಿಕಾರಿಗಳ ವ್ಯಾಪ್ತಿಗೆ ಬರುವಂತಹ ಅಧೀನಾಧಿಕಾರಿಗಳ ಕಾರ್ಯಗಳನ್ನು ಮೇಲುಸ್ತುವಾರಿ ಮಾಡುವವರಾಗಿರುತ್ತಾರೆ. ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರುರವರಿಂದ ಸೂಚಿಸಲ್ಪಟ್ಟ ಇಲಾಖಾ ಕರ್ತವ್ಯಗಳನ್ನು ನಿರ್ವಹಿಸಿ, ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಸಹಾಯ ನೀಡುತ್ತಾರೆ.

ಆ) <u>ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು:</u>
ಇವರು ಡಿ.ಓ.ಪಿ. ಪ್ರಕಾರ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ಮೇಲಾಧಿಕಾರಿಗಳಿಗೆ ಸರ್ಕಾರಿ ಕಾರ್ಯಗಳಲ್ಲಿ ಸಹಕರಿಸುತ್ತಾರೆ.

ಇ) <u>ವಿದ್ಯುತ್ ಪರಿವೀಕ್ಷಕರು, ಮೈಸೂರು ಉತ್ತರ, ಮೈಸೂರು:</u>
ಇವರು ಡಿ.ಓ.ಪಿ. ಪ್ರಕಾರ ಮೈಸೂರು ಉತ್ತರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ಮೇಲಾಧಿಕಾರಿಗಳಿಗೆ ಸರ್ಕಾರಿ ಕಾರ್ಯಗಳಲ್ಲಿ ಸಹಕರಿಸುತ್ತಾರೆ.

ಈ) <u>ವಿದ್ಯುತ್ ಪರಿವೀಕ್ಷಕರು, ಮೈಸೂರು ದಕ್ಷಿಣ, ಮೈಸೂರು:</u>
ಇವರು ಡಿ.ಓ.ಪಿ. ಪ್ರಕಾರ ಮೈಸೂರು ದಕ್ಷಿಣ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ಮೇಲಾಧಿಕಾರಿಗಳಿಗೆ ಸರ್ಕಾರಿ ಕಾರ್ಯಗಳಲ್ಲಿ ಸಹಕರಿಸುತ್ತಾರೆ.

ಉ) <u>ಉಪ ವಿದ್ಯುತ್ ಪರಿವೀಕ್ಷಕರು, ಮೈಸೂರು ಉತ್ತರ, ಮೈಸೂರು:</u>
ಇವರು ಡಿ.ಓ.ಪಿ. ಪ್ರಕಾರ ಮೈಸೂರು ಜಿಲ್ಲೆಯಲ್ಲಿ ಅವರ ಕಾರ್ಯವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ಮೇಲಾಧಿಕಾರಿಗಳಿಗೆ ಸರ್ಕಾರಿ ಕಾರ್ಯಗಳಲ್ಲಿ ಸಹಕರಿಸುತ್ತಾರೆ.

ಊ) <u>ಉಪ ವಿದ್ಯುತ್ ಪರಿವೀಕ್ಷಕರು, ಮೈಸೂರು ದಕ್ಷಿಣ, ಮೈಸೂರು:</u>
ಇವರು ಡಿ.ಓ.ಪಿ. ಪ್ರಕಾರ ಮೈಸೂರು ಜಿಲ್ಲೆಯಲ್ಲಿ ಅವರ ಕಾರ್ಯವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ಮೇಲಾಧಿಕಾರಿಗಳಿಗೆ ಸರ್ಕಾರಿ ಕಾರ್ಯಗಳಲ್ಲಿ ಸಹಕರಿಸುತ್ತಾರೆ.

ಋ) <u>ಸಹಾಯಕ ವಿದ್ಯುತ್ ಪರಿವೀಕ್ಷಕರು (ಕ್ಷೇತ್ರೀಯ):</u>
ಇವರು ಡಿ.ಓ.ಪಿ. ಪ್ರಕಾರ ಮೈಸೂರು ಜಿಲ್ಲೆಯಲ್ಲಿ ಅವರ ಕಾರ್ಯವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ಮೇಲಾಧಿಕಾರಿಗಳಿಗೆ ಸರ್ಕಾರಿ ಕಾರ್ಯಗಳಲ್ಲಿ ಸಹಕರಿಸುತ್ತಾರೆ.

ಎ) <u>ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಚೇರಿ):</u>
ಇವರು ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು ಮತ್ತು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಮೈಸೂರು ಇವರ ಕಾರ್ಯವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಸ್ಥಾವರಗಳ ನಕ್ಷೆ ಪರಿಶೀಲನೆ, ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆಗೆ ಕಡತ ಪರಿಶೀಲಿಸುವುದು, ವಿದ್ಯುತ್ ಅಪಘಾತಗಳ ತನಿಖಾ ವರದಿ ಅಂತಿಮಗೊಳಿಸಲು ವರದಿ

ತಯಾರಿಸುವುದು, ವಲಯದ ಪ್ರಗತಿ ವರದಿಗಳ ಅಂಕಿ ಅಂಶಗಳನ್ನು ಕ್ರೋಢೀಕರಿಸುವುದು ಮತ್ತು ಮೇಲಾಧಿಕಾರಿಗಳು ಸೂಚಿಸುವ ಇತರ ಕೆಲಸಗಳನ್ನು ನಿರ್ವಹಿಸುತ್ತಾರೆ.

ಏ) <u>ಲೆಕ್ಕಾಧಿಕಾರಿಗಳು:</u>
ಮೈಸೂರು ವಲಯದಲ್ಲಿ ವಿದ್ಯುತ್ ತೆರಿಗೆ ವ್ಯಾಪ್ತಿಗೆ ಬರುವ ವಿದ್ಯುತ್ ಸ್ಥಾವರಗಳ ಕಡತಗಳ ಮೇಲ್ವಿಚಾರಣೆ ಮಾಡುವುದು, ವಲಯದ ಚಲನ್ ಮರು ಹೊಂದಾಣಿಕೆ, ಖರ್ಚುವೆಚ್ಚಗಳ ಕ್ರೋಢೀಕೃತ ವರದಿ, ಎ.ಜಿ. ಆಡಿಟ್‌ಗಳಿಗೆ ಉತ್ತರಿಸುವುದು, ಅಧೀನ ಸಿಬ್ಬಂದಿಗಳ ಕೆಲಸಗಳ ಮೇಲ್ವಿಚಾರಣೆ ಮಾಡುವುದು ಮತ್ತು ಮೇಲಾಧಿಕಾರಿಗಳು ಸೂಚಿಸುವ ಇತರ ಕೆಲಸಗಳನ್ನು ನಿರ್ವಹಿಸಬೇಕಾಗಿರುತ್ತದೆ.

ಐ) <u>ವ್ಯವಸ್ಥಾಪಕರು:</u>
ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಕಚೇರಿಯ ಆಡಳಿತಾತ್ಮಕ ಕೆಲಸಗಳು ಸುಸೂತ್ರವಾಗಿ ನಡೆಯುವಂತೆ ನಡೆಯಲು ಸಹಕರಿಸುವುದು. ಸೇವಾ ಪುಸ್ತಕಗಳ ನಿರ್ವಹಣೆ, ಸಿಬ್ಬಂದಿ ಸಂಬಳ, ಡಿ.ಸಿ. ಬಿಲ್‌ಗಳು ಮತ್ತು ಇತರ ಬಿಲ್ಲುಗಳ ತಯಾರಿಕೆ ಮತ್ತು ಮೇಲು ರುಜುಗೊಳಸಲು ಅದೀನ ಸಿಬ್ಬಂದಿಯವರಿಂದ ಕೆಲಸ ತೆಗೆದು ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಇತರ ಕೆಲಸಗಳನ್ನು ನಿರ್ವಹಿಸಬೇಕಾಗಿರುತ್ತದೆ.

ಒ) <u>ಅಧೀಕ್ಷಕರು:</u>
ಲೆಕ್ಕಾಧಿಕಾರಿಗಳು ಮತ್ತು ವ್ಯವಸ್ಥಾಪಕರಿಗೆ ಕಚೇರಿ ಕೆಲಸಗಳಲ್ಲಿ ಸಹಕರಿಸುವುದು. ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿನ ಸಿನಿಮಾ ಅಪರೇಟರ್ ರಹದಾರಿ ನವೀಕರಿಸಲು ಮತ್ತು ಹಿಂಬರಹಗೊಳಿಸುವ ಕಾರ್ಯಗಳಲ್ಲಿ ಅರ್ಜಿಗಳನ್ನು ಪರಿಶೀಲಿಸಿ ವಿದ್ಯುತ್ ಪರಿವೀಕ್ಷಕರಿಗೆ ಮಂಡಿಸುವುದು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಇತರ ಕೆಲಸಗಳನ್ನು ನಿರ್ವಹಿಸುವುದು.

ಓ) <u>ಪ್ರಥಮ ದರ್ಜೆ ಸಹಾಯಕರು:</u>
ನಿಯಮಗಳನುಸಾರ ಎಲ್ಲಾ ತರಹದ ಬಿಲ್ಲುಗಳನ್ನು ತಯಾರಿಸಿ ವ್ಯವಸ್ಥಾಪಕರ ಮುಖಾಂತರ ಕಚೇರಿಯ ಮುಖ್ಯಸ್ಥರಿಗೆ ಸಲ್ಲಿಸುವುದು. ನಗದು ಪುಸ್ತಕ ಮತ್ತು ಇತರೆ ಸಂಬಂಧಿಸಿದ ಪುಸ್ತಕಗಳನ್ನು ನಿರ್ವಹಿಸುವುದು. ಮೈಸೂರು ಜಿಲ್ಲೆಯ ಹೊಸ ಹಾಗೂ ನವೀಕರಣಕ್ಕಾಗಿ ಬರುವಂತಹ ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿದ್ಯುತ್ ಮೇಲ್ವಿಚಾರಕರು ಮತ್ತು ವಿದ್ಯುತ್ ತಂತಿ ಕೆಲಸಗಾರರ ರಹದಾರಿ ಪತ್ರಗಳ ಅರ್ಜಿಗಳನ್ನು ಪರಿಶೀಲಿಸಿ ಉಪ ವಿದ್ಯುತ್ ಪರಿವೀಕ್ಷಕರಿಗೆ ಮಂಡಿಸುವುದು. ಎಲ್ಲಾ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ನಿರ್ವಹಿಸುವುದು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಇತರ ಕೆಲಸಗಳನ್ನು ನಿರ್ವಹಿಸುವುದು.

ಔ) <u>ಶೀಘ್ರಲಿಪಿಗಾರರು:</u>
ಕಚೇರಿಯ ಮುಖ್ಯಸ್ಥರು ಮತ್ತು ಎಲ್ಲಾ ಮೇಲಾಧಿಕಾರಿಗಳಿಗೆ ಕಚೇರಿಯ ದಾಖಲೆಗಳ, ಪತ್ರಗಳ, ಇತರೆ ಬೆರಳಚ್ಚಿನ ಕಾರ್ಯಗಳಲ್ಲಿ, ಡೇಟಾ ಎಂಟ್ರಿ ಕೆಲಸಗಳು ಮತ್ತು ಮೇಲಾಧಿಕಾರಿಗಳು ಸೂಚಿಸುವ ಇತರ ಕೆಲಸಗಳನ್ನು ನಿರ್ವಹಿಸಬೇಕಾಗಿರುತ್ತದೆ.

ಕ) <u>ದ್ವಿತೀಯ ದರ್ಜೆ ಸಹಾಯಕರು:</u>
ಕಚೇರಿಗೆ ಬರುವ ಎಲ್ಲಾ ಕಡತ/ಅರ್ಜಿಗಳ ಸ್ವೀಕೃತಿ ಮತ್ತು ರವಾನೆ ಮಾಡುವುದು, ಎಲ್ಲಾ ಐ.ಪಿ.ಪಿ., ಸಿ.ಪಿ.ಪಿ.ಗಳು ಸಲ್ಲಿಸುವ 'ಜಿ' ನಮೂನೆಗಳನ್ನು ನಿರ್ವಹಿಸಿ ಸಂಬಂಧಿಸಿದ ಪುಸ್ತಕಗಳಲ್ಲಿ ನಮೂದಿಸುವುದು, ನಮೂನೆ-4 ಅನ್ನು ಸಿದ್ಧಪಡಿಸಿ ಉ.ವಿ.ಪ. ರಿಗೆ ಒಪ್ಪಿಸುವುದು, ಅಂಚೆ ಚೀಟಿಗಳ ಲೆಕ್ಕಗಳ ನಿರ್ವಹಣೆ, ಸ್ವೀಕೃತಗೊಂಡ ಕಡತಗಳನ್ನು ಆಯಾ ಅಧಿಕಾರಿಗಳಿಗೆ ಸಲ್ಲಿಸುವುದು ಮತ್ತು ಮೇಲಾಧಿಕಾರಿಗಳು ಸೂಚಿಸುವ ಇತರೆ ಕೆಲಸಗಳನ್ನು ನಿರ್ವಹಿಸುವುದು.

ಕಿ) <u>ಚಾಲಕ</u>
ಸರ್ಕಾರದ ವಾಹನವನ್ನು ಉತ್ತಮ ಚಾಲನೆ ಸ್ಥಿತಿಯಲ್ಲಿಡುವುದು ಮತ್ತು ಅಧಿಕಾರಿಗಳ ಪರಿವೀಕ್ಷಣೆಗೆ ಲಭ್ಯವಿರುವುದು.

ಖ) ಜವಾನ

ಕಚೇರಿಯ ಶುಚಿತ್ವವನ್ನು ಕಾಪಾಡುವುದು, ಸ್ಥಳೀಯ ಟಪಾಲುಗಳನ್ನು ವಿತರಿಸುವುದು, ಖಜಾನೆಗೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸುವುದು, ಕಡತಗಳನ್ನು ನಿರ್ವಹಣೆ ಮಾಡುವುದು ಮತ್ತು ಕಚೇರಿಯ ಮುಖ್ಯಸ್ಥರು ನಿಗದಿಪಡಿಸಿದ ಕೆಲಸಗಳನ್ನು ನಿರ್ವಹಿಸುವುದು.

3. ಕಚೇರಿ ಕೆಲಸ ಕಾರ್ಯಗಳ ನಿರ್ವಹಣೆಯ ಪದ್ಧತಿ ಮತ್ತು ನಿರ್ಣಯದ ಅಧಿಕಾರ:

ಡಿ.ಒ.ಪಿ. ಪ್ರಕಾರ ನಕ್ಷೆ ಅನುಮೋದನೆಗೆ ಮತ್ತು ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮತ್ತು ಅನುಮೋದನೆಗೆ ಸಲ್ಲಿಸಿದಂತಹ ಅರ್ಜಿಗಳನ್ನು ಪರಿಶೀಲಿಸುವುದು. ಸಂಬಂಧಿಸಿದ ಅಧಿಕಾರಿಗಳು ಅರ್ಜಿಗಳನ್ನು ಪರಿಶೀಲಿಸಿ ನ್ಯೂನತೆಗಳೇನಾದರೂ ಇದ್ದಲ್ಲಿ ಅರ್ಜಿದಾರರಿಗೆ ತಿಳಿಸುವುದು. ಅರ್ಜಿ ಸರಿ ಇದ್ದಲ್ಲಿ ನಕ್ಷೆ ಅನುಮೋದನೆ ಅಥವಾ ವಿದ್ಯುತ್ ಸ್ಥಾವರದ ಪರಿವೀಕ್ಷಣೆ ಮತ್ತು ಅನುಮೋದನೆಗೆ ಕ್ರಮ ಕೈಗೊಳ್ಳುವುದು. ಡಿ.ಒ.ಪಿ. ಗೆ ಅನುಗುಣವಾಗಿ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆ ಮಾಡಿ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ವಿದ್ಯುತ್ ಸ್ಥಾವರದ ಮಾಲೀಕರಿಗೆ ಸೂಚಿಸುವುದು.

4. ಕೆಲಸ ನಿರ್ವಹಿಸಲು ಇಲಾಖೆಯು ಸೃಜನೆ ಮಾಡಿಕೊಂಡಿರುವ ಪದ್ಧತಿಗಳು:

ಕಚೇರಿ ಕಾರ್ಯ ವಿಧಾನ ಕೈಪಿಡಿಯಲ್ಲಿ ತಿಳಿಸಿರುವಂತೆ ಕಚೇರಿಯ ದೈನಂದಿನ ಕಾರ್ಯಗಳನ್ನು ನಿರ್ವಹಿಸುವುದು. ಡಿ.ಒ.ಪಿ. ಗೆ ಅನುಗುಣವಾಗಿ ವಿದ್ಯುತ್ ಸ್ಥಾವರಗಳ ನಕ್ಷೆ ಅನುಮೋದನೆ, ಪರಿವೀಕ್ಷಣೆ ಮತ್ತು ಅಂತಿಮ ಅನುಮೋದನೆ ಇವುಗಳನ್ನು ಇಲಾಖೆಯ ಪರಿವೀಕ್ಷಣಾ ಕೈಪಿಡಿಯಲ್ಲಿ ಸೂಚಿಸಿದಂತೆ ಮಾಡುವುದು. ತೆರಿಗೆ ಕೈಪಿಡಿಯನ್ವಯ ವಿದ್ಯುತ್ ತೆರಿಗೆ ವಸೂಲಿಗೆ ಕ್ರಮ ಕೈಗೊಳ್ಳುವುದು ಮತ್ತು ಲಿಫ್ಟ್ ವಿದ್ಯುತ್ ಸ್ಥಾವರಗಳನ್ನು ಲಿಫ್ಟ್ ಕಾಯ್ದೆ ಮತ್ತು ನಿಯಮಗಳ ಅನ್ವಯ ಪರಿವೀಕ್ಷಣೆ ಮಾಡುವುದು. ಕರ್ನಾಟಕ ಸಿನಿಮಾ ನಿಯಮಗಳ ಅನ್ವಯ ಸಿನಿಮಾ ವಿದ್ಯುತ್ ಸ್ಥಾವರಗಳ ಪರಿವೀಕ್ಷಣೆ ಮಾಡುವುದು. ಅಲ್ಲದೆ ಇಲಾಖಾ ಮುಖ್ಯಸ್ಥರು ಸುತ್ತೋಲೆಗಳ ಮುಖಾಂತರ ತಿಳಿಸುವಂತೆ ಕರ್ತವ್ಯಗಳನ್ನು ನಿರ್ವಹಿಸುವುದು.

5. ಇಲಾಖೆಯ ಕಾರ್ಯ ಸಾಧನೆ ಮಾಡಲು ಇಲಾಖೆಯ ಸುಪರ್ದಿಯಲ್ಲಿರುವ, ಉಪಯೋಗಿಸಲಾಗುತ್ತಿರುವ ಅಥವಾ ಇಲಾಖೆಯ ಅಡಿಯಲ್ಲಿ ಬಳಸಲಾಗುತ್ತಿರುವ ನಿಯಮಗಳು, ಕಾನೂನು, ಆದೇಶಗಳು, ಕಾಯ್ದೆಗಳು, ಕೈಪಿಡಿಗಳು ಇತ್ಯಾದಿ:

ಅ) ಕರ್ನಾಟಕ ನಾಗರೀಕ ಸೇವಾ ನಿಯಮಗಳು.

ಆ) ಕೆ.ಎಫ್.ಸಿ. 1958.

ಇ) ಕೆ.ಟಿ.ಸಿ.

ಈ) ಎಂ.ಸಿ.ಇ.

ಉ) ಕಚೇರಿ ಕಾರ್ಯ ವಿಧಾನ ಕೈಪಿಡಿ.

ಊ) ಕೆ.ಸಿ.ಎಸ್ (ಸಿಸಿಎ) ನಿಯಮಗಳು – 1957.

ಋ) ಕೆ.ಸಿ.ಎಸ್ (ಕಂಡಕ್ಟ್) ನಿಯಮಗಳು– 1966.

ಎ) ಭಾರತೀಯ ವಿದ್ಯುತ್ ಕಾಯ್ದೆ – 2003.

ಏ) ಕೇಂದ್ರೀಯ ವಿದ್ಯುಚ್ಛಕ್ತಿ ಪ್ರಾಧಿಕಾರ ರೆಗ್ಯುಲೇಶನ್ಸ್, 2010.

ಐ) ಕರ್ನಾಟಕ ಲಿಫ್ಟ್ ಕಾಯ್ದೆ, 2012 ಮತ್ತು ನಿಯಮಗಳು – 2015.

ಒ) ಕರ್ನಾಟಕ ಸಿನಿಮ (ನಿಯಂತ್ರಣ) ಕಾಯ್ದೆ 1964 ಮತ್ತು ನಿಯಮಗಳು 2014.

ಓ) ಕರ್ನಾಟಕ ವಿ ಸಿ ಆರ್ ಆರ್ ನಿಯಮಗಳು– 1984.

ಔ) ಕರ್ನಾಟಕ ವಿದ್ಯುತ್ ಗುತ್ತಿಗೆದಾರರ ಪರವಾನಗಿ ಮತ್ತು ವಿದ್ಯುತ್ ಪರ್ಯವೇಕ್ಷಕರ ಮತ್ತು ತಂತಿ ಕೆಲಸಗಾರರ ರಹದಾರಿ ನೀಡುವಿಕೆ ನಿಯಮಗಳು – 2012.

ಕ) ಕರ್ನಾಟಕ ವಿದ್ಯುಚ್ಛಕ್ತಿ ಬಳಕೆಯ ಅಥವಾ ಮಾರಾಟದ ಮೇಲಿನ ತೆರಿಗೆ ಕಾಯ್ದೆ – 1959 ಮತ್ತು ನಿಯಮಗಳು – 2014.

ಕಿ) ನ್ಯಾಷನಲ್ ಎಲೆಕ್ಟ್ರಿಕ್ ಕೋಡ್

ಖ) ವಿದ್ಯುತ್ ಪರಿವೀಕ್ಷಣಾ ಕೈಪಿಡಿ ಮತ್ತು ವಿದ್ಯುತ್ ತೆರಿಗೆ ಕೈಪಿಡಿ.

6. ಕಚೇರಿಯ ಅಧಿನದಲ್ಲಿರುವ ಅಥವಾ ಸುಪರ್ದಿಯಲ್ಲಿರುವ ದಾಖಲಾತಿಗಳು:

ಆಡಳಿತ ಶಾಖೆ:

ಅ) ಸೇವಾ ಪುಸ್ತಕಗಳು.

ಆ) ವೇತನ ಮತ್ತು ಪ್ರಯಾಣ ಭತ್ಯೆ ವಹಿ.

ಇ) ಬಿಲ್ಲು ವಹಿ.

ಈ) ನಗದು ಪುಸ್ತಕ.

ಉ) ಕಚೇರಿ ಖರ್ಚು ವೆಚ್ಚದ ಕ್ರೋಢಿಕೃತ ವಹಿ

ಊ) ರಸೀದಿ ಪುಸ್ತಕ.

ಋ) ಡಿ.ಡಿ., ಚೆಕ್ ಮತ್ತು ಹಣ ರವಾನೆ ವಹಿ.

ಎ) ವೋಚರ್ ಕಡತ.

ಏ) ಸ್ವೀಕೃತಿ ಮತ್ತು ರವಾನೆ ವಹಿ.

ಐ) ವಿದ್ಯುತ್ ತೆರಿಗೆ ವಹಿ.

ಒ) ಸಿನಿಮಾ ಆಪರೇಟರ್ ರಹದಾರಿ ವಹಿ.

ಓ) ವಿದ್ಯುತ್ ಗುತ್ತಿಗೆದಾರರ ಪರವಾನಗಿ ವಹಿ.

ಔ) ವಿದ್ಯುತ್ ಮೇಲ್ವಿಚಾರಕರು ಮತ್ತು ವಿದ್ಯುತ್ ತಂತಿ ಕೆಲಸಗಾರರ ರಹದಾರಿ ವಹಿ.

ಅಂ) ವಿದ್ಯುತ್ ಮೇಲ್ವಿಚಾರಕರು ಮತ್ತು ವಿದ್ಯುತ್ ತಂತಿ ಕೆಲಸಗಾರರ ರಹದಾರಿ ಪರೀಕ್ಷಾ ವಹಿ.

ಅಃ) ವಿದ್ಯುತ್ ಮೇಲ್ವಿಚಾರಕರು ಮತ್ತು ವಿದ್ಯುತ್ ತಂತಿ ಕೆಲಸಗಾರರ ರಹದಾರಿ ಹಿಂಬರಹದ ವಹಿ.

ತಾಂತ್ರಿಕ ವಿಭಾಗ:

ಅ) ನೀಲಿ ನಕ್ಷೆ ಅನುಮೋದನೆ ವಹಿ.

ಆ) ವಿದ್ಯುತ್ ಸ್ಥಾವರಗಳ ಅನುಮೋದನೆ ವಹಿ.

ಇ) ವಿದ್ಯುತ್ ಅಪಘಾತಗಳ ತನಿಖಾ ವರದಿ ವಹಿ.

ಈ) ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣಾ ವಹಿ.

7. ಅನ್ವಯಿಸುವುದಿಲ್ಲ.

8. ಇಲ್ಲ.

9. ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮಾಹಿತಿ ಸೂಚಿ :-

| ಕ್ರ. ಸಂ. | ಹುದ್ದೆ | ಹೆಸರು ಶ್ರೀ/ಶ್ರೀಮತಿ/ಕುಮಾರಿ | ದೂರವಾಣಿ |
|---|---|---|---|
| 1 | ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು | ಹೆಚ್.ಬಿ. ಲಕ್ಷ್ಮೀಶ | 2463177 |
| 2 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | ಹೆಚ್.ಎಸ್. ವೆಂಕಟೇಶ್ | 2463176 |
| 3 | ವಿದ್ಯುತ್ ಪರಿವೀಕ್ಷಕರು, ಮೈಸೂರು ಉತ್ತರ, ಮೈಸೂರು | ಅಲ್ತಾಫ್ ಹುಸೇನ್ ಜಕಾರ್ತಿ | 2463178 |
| 4 | ವಿದ್ಯುತ್ ಪರಿವೀಕ್ಷಕರು, ಮೈಸೂರು ದಕ್ಷಿಣ, ಮೈಸೂರು | ಎಂ.ನೇತ್ರಾವತಿ | 2463177 |
| 5 | ಉಪ ವಿದ್ಯುತ್ ಪರಿವೀಕ್ಷಕರು, ಮೈಸೂರು ಉತ್ತರ, ಮೈಸೂರು | ಎಂ.ಅರ್ಚನ | 2463177 |
| 6 | ಉಪ ವಿದ್ಯುತ್ ಪರಿವೀಕ್ಷಕರು, ಮೈಸೂರು ದಕ್ಷಿಣ, ಮೈಸೂರು | ಎಂ.ಮನೋಜ್ | 2463177 |
| 7 | ಲೆಕ್ಕಾಧಿಕಾರಿಗಳು | ಖಾಲಿ | |
| 8 | ಸಹಾಯಕ ವಿದ್ಯುತ್ ಪರಿವೀಕ್ಷಕರು-1 (ಕಚೇರಿ) | ಎನ್.ಎಸ್.ಉಷಾ | 2463177 |

| | | | |
|---|---|---|---|
| 9 | ಸಹಾಯಕ ವಿದ್ಯುತ್ ಪರಿವೀಕ್ಷಕರು--2 (ಕಚೇರಿ) | ಕೆ.ಶ್ರುತಿ | 2463177 |
| 10 | ಸಹಾಯಕ ವಿದ್ಯುತ್ ಪರಿವೀಕ್ಷಕರು, ಮೈಸೂರು ಉತ್ತರ -1, ಮೈಸೂರು | ಖಾಲಿ | |
| 11 | ಸಹಾಯಕ ವಿದ್ಯುತ್ ಪರಿವೀಕ್ಷಕರು, ಮೈಸೂರು ಉತ್ತರ -2, ಮೈಸೂರು | ಪಿ.ಸಹನ | 2463177 |
| 12 | ಸಹಾಯಕ ವಿದ್ಯುತ್ ಪರಿವೀಕ್ಷಕರು, ಮೈಸೂರು ದಕ್ಷಿಣ-1, ಮೈಸೂರು | ಅರ್ಶಿಯಾ ಅಂಜುಂ | 2463177 |
| 13 | ಸಹಾಯಕ ವಿದ್ಯುತ್ ಪರಿವೀಕ್ಷಕರು, ಮೈಸೂರು ದಕ್ಷಿಣ-2, ಮೈಸೂರು | ಎನ್ ರಾಜು | 2463177 |
| 14 | ವ್ಯವಸ್ಥಾಪಕರು | ಖಾಲಿ | |
| 15 | ಅಧೀಕ್ಷಕರು – 1 | ಚಂದ್ರಿಕಾ.ಎಂ.ಹೆಚ್ | 2463177 |
| 16 | ಅಧೀಕ್ಷಕರು – 2 | ಖಾಲಿ | |
| 17 | ಪ್ರ. ದ. ಸ – 1 | ಖಾಲಿ | 2463177 |
| 18 | ಪ್ರ. ದ. ಸ – 2 | ಕಲ್ಪನಾ ರಾಜು | 2463177 |
| 19 | ಶೀಘ್ರ ಲಿಪಿಕಾರರು | ಖಾಲಿ | |
| 20 | ದ್ವಿ. ದ. ಸ.-1 | ಖಾಲಿ | |
| 21 | ದ್ವಿ. ದ. ಸ.-2 | ಖಾಲಿ | |
| 22 | ವಾಹನ ಚಾಲಕರು | ಖಾಲಿ | |
| 23 | ಗ್ರೂಪ್ 'ಡಿ' ಜವಾನ – 1 | ಕೆ.ಎ.ಜಗದೀಶ್ | |
| 24 | ಗ್ರೂಪ್ 'ಡಿ' ಜವಾನ – 2 | ಖಾಲಿ | |

10. ಅಧಿಕಾರಿಗಳ ಮತ್ತು ಸಿಬ್ಬಂದಿ ಸ್ವೀಕರಿಸುತ್ತಿರುವ ವೇತನ :

| ಕ್ರ. ಸಂ. | ಹುದ್ದೆಯ ಹೆಸರು | ಮಂಜೂರಾದ ಸಿಬ್ಬಂದಿ | ವೇತನ ಶ್ರೇಣಿ |
|---|---|---|---|
| 1 | ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು | 1 | 82000-1900-83900-2200-97100-2500-112100-2800-117700 |
| 2 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | 1 | 74400-1900-83900-2200-97100-2500-109600 |
| 3 | ವಿದ್ಯುತ್ ಪರಿವೀಕ್ಷಕರು | 2 | 67550-1650-72500-1900-83900-2200-97100-2500-104600 |
| 4 | ಉಪ ವಿದ್ಯುತ್ ಪರಿವೀಕ್ಷಕರು | 2 | 52650-1250-53900-1450-62600-1650-72500-1900-83900-2200-97100 |
| 5 | ಲೆಕ್ಕಾಧಿಕಾರಿಗಳು | 1 | 52650-1250-53900-1450-62600-1650-72500-1900-83900-2200-97100 |
| 6 | ಸಹಾಯಕ ವಿದ್ಯುತ್ ಪರಿವೀಕ್ಷಕರು | 6 | 43100-1100-46400-1250-53900-1450-62600-1650-72500-1900-83900 |

| | | | |
|---|---|---|---|
| 7 | ವ್ಯವಸ್ಥಾಪಕರು | 1 | 40900-1100-46400-1250-53900-1450-62600-1650-72500-1900-78200 |
| 8 | ಅಧೀಕ್ಷಕರು | 2 | 37900-950-39800-1100-46400-1250-53900-1450-62600-1650-70850 |
| 9 | ಪ್ರ ದ ಸ | 2 | 27650-650-29600-750-32600-850-36000-950-39800-1100-46400-1250-52650 |
| 10 | ಶೀಘ್ರ ಲಿಪಿಕಾರರು | 1 | 27650-650-29600-750-32600-850-36000-950-39800-1100-46400-1250-52650 |
| 11 | ದ್ವಿ ದ ಸ | 2 | 21400-500-22400-550-24600-600-27000-650-29600-750-32600-850-36000-950-39800-1100-42000 |
| 12 | ವಾಹನ ಚಾಲಕರು | 1 | 21400-500-22400-550-24600-600-27000-650-29600-750-32600-850-36000-950-39800-1100-42000 |
| 14 | ಗ್ರೂಪ್ 'ಡಿ' ಜವಾನ | 2 | 17000-400-18600-450-20400-500-22400-550-24600-600-27000-650-28950 |
| | ಒಟ್ಟು | 24 | |

11. ಅನ್ವಯಿಸುವುದಿಲ್ಲ.
12. ಅನ್ವಯಿಸುವುದಿಲ್ಲ.
13. ಅನ್ವಯಿಸುವುದಿಲ್ಲ.
14. 4(1)(ಎ) ಪ್ರಕಟಿಸಲಾಗಿದೆ ಮತ್ತು 4(1)(ಬಿ) ವಿದ್ಯುನ್ಮಾನ ರೂಪದಲ್ಲಿ ವಿನಂತಿಯ ಮೇರೆಗೆ ವೀಕ್ಷಿಸುವುದಕ್ಕೆ ಲಭ್ಯವಿರುವುದು.
15. ಇಲ್ಲ.
16. <u>ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ವಿಳಾಸ ಮತ್ತಿತರ ವಿವರ:</u>

| ಕ್ರ. ಸಂ. | ಹೆಸರು (ಶ್ರೀ / ಶ್ರೀಮತಿ / ಕುಮಾರ / ಕುಮಾರಿ) | ಅಧಿಕಾರಿಯ ಹುದ್ದೆ | ಮಾಹಿತಿ ಹಕ್ಕು 2005 ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ, |
|---|---|---|---|
| 1 | ಅಲ್ತಾಫ್ ಹುಸೇನ್ ಜಕಾರ್ತಿ | ವಿದ್ಯುತ್ ಪರಿವೀಕ್ಷಕರು, ಮೈಸೂರು ಉತ್ತರ, ಮೈಸೂರು | ತಮ್ಮ ಅಧಿಕಾರ ಪ್ರತ್ಯಾಯೋಜನೆಯಡಿಯಲ್ಲಿ ಬರುವ ಸ್ಥಾವರಗಳಿಗೆ ಸಂಬಂಧಪಟ್ಟಂತೆ, ಸಿ.ಒ.ಸಿ. ನವೀಕರಣ ಮತ್ತು ಹಿಂಬರಹ ಕುರಿತು. |
| 2 | ಎಂ.ನೇತ್ರಾವತಿ | ವಿದ್ಯುತ್ ಪರಿವೀಕ್ಷಕರು, ಮೈಸೂರು ದಕ್ಷಿಣ, ಮೈಸೂರು | ತಮ್ಮ ಅಧಿಕಾರ ಪ್ರತ್ಯಾಯೋಜನೆಯಡಿಯಲ್ಲಿ ಬರುವ ಸ್ಥಾವರಗಳಿಗೆ ಸಂಬಂಧಪಟ್ಟಂತೆ, ಸಿ.ಒ.ಸಿ. ನವೀಕರಣ ಮತ್ತು ಹಿಂಬರಹ ಕುರಿತು. |

| | | | |
|---|---|---|---|
| 3 | ಎಂ.ಅರ್ಚನ | ಉಪ ವಿದ್ಯುತ್ ಪರಿವೀಕ್ಷಕರು, ಮೈಸೂರು ಉತ್ತರ, ಮೈಸೂರು | ತಮ್ಮ ಅಧಿಕಾರ ಪ್ರತ್ಯಾಯೋಜನೆಯಡಿಯಲ್ಲಿ ಬರುವ ಸ್ಥಾವರಗಳಿಗೆ ಸಂಬಂಧಪಟ್ಟಂತೆ, ಪರವಾನಗಿ ಮತ್ತು ರಹದಾರಿಗೆ ಕುರಿತು. |
| 4 | ಎಂ.ಮನೋಜ್ | ಉಪ ವಿದ್ಯುತ್ ಪರಿವೀಕ್ಷಕರು, ಮೈಸೂರು ದಕ್ಷಿಣ, ಮೈಸೂರು | ತಮ್ಮ ಅಧಿಕಾರ ಪ್ರತ್ಯಾಯೋಜನೆಯಡಿಯಲ್ಲಿ ಬರುವ ಸ್ಥಾವರಗಳಿಗೆ ಸಂಬಂಧಪಟ್ಟಂತೆ, ಪರವಾನಗಿ ಮತ್ತು ರಹದಾರಿಗೆ ಕುರಿತು. |
| 5 | ಎನ್.ಎಸ್.ಉಷಾ | ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಚೇರಿ) | ಅಮುವಿಪ ರವರ ತಾಂತ್ರಿಕ ಅಧಿಕಾರ ಪ್ರತ್ಯಾಯೋಜನೆ ಅಡಿಯಲ್ಲಿ ಬರುವ ಸ್ಥಾವರಗಳಿಗೆ ಸಂಬಂಧಪಟ್ಟಂತೆ |
| 6 | ಕೆ.ಶೃತಿ | ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಚೇರಿ) | ಉಮುವಿಪ ರವರ ತಾಂತ್ರಿಕ ಅಧಿಕಾರ ಪ್ರತ್ಯಾಯೋಜನೆ ಅಡಿಯಲ್ಲಿ ಬರುವ ಸ್ಥಾವರಗಳಿಗೆ ಸಂಬಂಧಪಟ್ಟಂತೆ |
| 7 | ಚಂದ್ರಿಕಾ.ಎಂ.ಹೆಚ್ | ಅಧೀಕ್ಷಕರು–1 | ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ಮೈಸುರು ಕಚೇರಿಗೆ ಸಂಬಂಧಪಟ್ಟ ಆಡಳಿತಾತ್ಮಕ ವಿವರಗಳ ಕುರಿತು |

17. ಯಾವುದೇ ವಿಷಯದ ಮಾಹಿತಿಗಾಗಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಪ್ರತಿ ವರ್ಷ ಈ ಮಾಹಿತಿಗಳನ್ನು ನವೀಕರಿಸಲು ವ್ಯವಸ್ಥೆ ಮಾಡಲಾಗಿದೆ.

ಗಮನಿಸಿ: ಪರಿವೀಕ್ಷಣಾಧಿಕಾರಿಗಳ ಡಿ.ಒ.ಪಿ. ಯು (ಸರ್ಕಾರದ ಆದೇಶ ಸಂ. ಇ.ಎನ್ 5 ಇ.ಐ.ಎಸ್ 2012 ದಿ: 12-09-2013) ಕಚೇರಿಯಲ್ಲಿ ಲಭ್ಯವಿರುತ್ತದೆ ಅಥವಾ ಇಲಾಖಾ ವೆಬ್ ವಿಳಾಸ: http//www.ksei.gov.in ಇಲ್ಲಿಯೂ ಲಭ್ಯವಿರುತ್ತದೆ

ಮೊದಲನೆ ಅಪೀಲು ಅಧಿಕಾರಿ ಹೆಸರು ಮತ್ತು ಹುದ್ದೆ:
ಶ್ರೀ ಹೆಚ್.ಬಿ. ಲಕ್ಷ್ಮೀಶ
ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು,
ಮೈಸೂರು

ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು
ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು
ಮೈಸೂರು

---

ಮೆಮೊ ಸಂಖ್ಯೆ: ಎಸಿಇಐ(ಎಂವೈಎಸ್)/11 ಟಿಇಸಿ/2018-19/ 7950 ದಿನಾಂಕ: 15-12-18

ಪ್ರತಿ:

1. ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ರವರ ಘನ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಮಾಹಿತಿಗಾಗಿ.
3. ಕ.ಕ ಮತ್ತು ಮು.ಕ

ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು
ಮೈಸೂರು